# <u>ನಾನೇನ ಮಾಡಿದೆನೊ ರಂಗಯ್ಯ ರಂಗ</u>

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
4. **Note:** The wordings, given without highlights are as per Ref. 1. The wordings in Ref. 1 and that of the singer are slightly different. The wordings used by the singer (most of the singers have followed this) are marked in yellow highlights.
5. **Note:** The lyrics as per Ref. 2 are different. Hence they are given separately in green highlights. The lyrics in Ref. 3 matches with Ref. 2 above.

ರಾಗ: ಮೋಹನ ತಾಳ: ಅಟ

| | |
|---|---|
| ನಾನೇನ ಮಾಡಿದೆನೋ ರಂಗಯ್ಯ ರಂಗ | ನಾನೇನ ಮಾಡಿದೆನೋ ರಂಗಯ್ಯ ರಂಗ |
| ನೀ ಎನ್ನ ಕಾಯಬೇಕೋ ‖ ಪ ‖ | ನೀ ಎನ್ನ ಕಾಯಬೇಕೋ |
| | |
| ಮಾನಾಭಿಮಾನವು ನಿನ್ನದು ಎನಗೇನು | ಮಾನಾಭಿಮಾನವು ನಿನ್ನದು ಎನಗೇನು |
| ದೀನ ರಕ್ಷಕ ತಿರುಪತಿಯ ವೆಂಕಟ ರಮಣ ‖ ಅಪ ‖ | ದೀನ ರಕ್ಷಕ ತಿರುಪತಿ ವೆಂಕಟ ರಮಣ |
| | |
| ರಕ್ಕಸ ಸೂದನನೇ ಕೇಳು ಧ್ರುವ ರಾಯ | ರಕ್ಕಸ ತನುಜನಲ್ಲವೇ ಪ್ರಹಲ್ಲಾದನು |
| ಚಿಕ್ಕವನಲ್ಲವೇನೋ | ಚಿಕ್ಕ ಪ್ರಾಯದ ಧ್ರುವನು |
| ಉಕ್ಕಿ ಬರುವ ಕರ್ಮ ಮಾಡಿದ ಅಜಮಿಳ | ಸೊಕ್ಕಿನ ಪಾಪಮಾಡಿದಜಾಮಿಳನು ನಿನ್ನ |
| ನಿಮ್ಮಕ್ಕನ ಮಗನೇನೋ ‖ 1 ‖ | ಅಕ್ಕನ ಮಗನು ಏನೋ |
| | |
| ಕರೀರಾಜ ಕರೆಸಿದನೇ ದ್ರೌಪದಿ ದೇವಿ | ಕರೀರಾಜ ಕರೆಸಿದನೇ ದ್ರೌಪದಿ ದೇವಿ |
| ಬರೆದೋಲೆ ಕಳುಹಿದಳೇ | ಬರೆದೋಲೆ ಕಳುಹಿದಳೇ |

| | |
|---|---|
| ಹರುಷದಿಂದಲಿ ಋಷಿ ಪತ್ನಿಯ ಶಾಪವ | ಕರುಣದಿಂದಲಿ ಋಷಿ ಪತ್ನಿಯ ಶಾಪವ |
| ಪರಿಹರಿಸಿದೆಯಲ್ಲೋ    \|\| 2 \|\| | ಪರಿಹರಿಸಿದೆಯಲ್ಲೋ |
| | |
| ಮುಪ್ಪಿಡಿ ಅವಲಕ್ಕಿಯ ತಂದವನಿಗೆ | ಒಪ್ಪಿಡಿಯವಲಕ್ಕಿಯ ನಿನಗೆ ತಂದು |
| ಒಪ್ಪುವಂತೆ ಕೊಡಲಿಲ್ಲವೇ | ಒಪ್ಪಿಸಿದವಗೊಲಿದೆ |
| ಸರ್ಪ ಶಯನ ಶ್ರೀ ಪುರಂದರ ವಿಠ್ಠಲ | ಒಪ್ಪವೆ ನಿನಗೆ ಶ್ರೀ ಪುರಂದರ ವಿಠ್ಠಲ - |
| ಅಪ್ರಮೇಯ ಕಾಯೋ    \|\| 3 \|\| | ವರಪ್ಪಂತೆ ಎನ್ನ ಕಾಯೋ |

**Note:** The lyrics as per book in Ref. 2 above are different.  Hence they are given separately in green highlights.

ರಾಗ:   ಸಾರಂಗ                    ತಾಳ:   ಅಟ್ಟ

ನಾನೇನು ಮಾಡಿದೆನೋ ಕೃಷ್ಣಯ್ಯ
ನೀನೆನ್ನ ಸಲಹ ಬೇಕು    || ಪ ||

ಕರಿರಾಜ ಕರೆಸಿದನೇ ದ್ರೌಪದಿ ದೇವಿ
ಬರೆದೋಲೆ ಕಳುಹಿದಳೆ
ಹರುಷದಿಂದಲಿ ಋಷಿ ಪತ್ನಿಯ ಶಾಪವ
ಪರಿಹರಿಸಿದೆಯಲ್ಲೋ ಹೇ ಸ್ವಾಮಿ    || ೧ ||

ರಕ್ಕಸ ತನುಜನಲ್ಲವೆ ಪ್ರಹಲ್ಲಾದ
ಚಿಕ್ಕ ಪ್ರಾಯದ ಧ್ರುವನು
ಸಿಕ್ಕಿದ ಪಾಪವ ಮಾಡಿದ ಅಜಾಮಿಳ
ನಿಮ್ಮಕ್ಕನ ಮಗನೇ ಪೇಳೊ ಸ್ವಾಮಿ    || ೨ ||

ಒಪ್ಪಿಡಿ ಅವಲಕ್ಕಿಯ ಕೃಷ್ಣಯ್ಯ ನಿನ್ನ
ಗೊಪ್ಪಿಸಿದವಗೊಲಿದೆ
ಒಪ್ಪೇನೊ ನಿನಗೆ ಶ್ರೀ ಪುರಂದರ ವಿಠ್ಠಲ
ವರಪ್ಪಂತೆ ಕಾಯ ಬೇಕೋ ಹೇ ಸ್ವಾಮಿ    || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಕರಿರಾಜ –** ಗಜೇಂದ್ರ.

**ಋಷಿಪತ್ನಿ –** ಅಹಲ್ಯೆ (ರಾಮಾವತಾರದಲ್ಲಿ ಅಹಲ್ಯಾ ಶಾಪ ವಿಮೋಚನ ಪ್ರಸಂಗ).

**ರಕ್ಕಸ ತನುಜನಲ್ಲವೆ –** ಪ್ರಹ್ಲಾದನು ವಿಷ್ಣು ಭಕ್ತನಾದರೂ ದೈತ್ಯ ಕುಲದಲ್ಲಿ ಹುಟ್ಟಿದವನು; ಹಿರಣ್ಯಕಶಿಪು ದೈತ್ಯನೇ.

**ತನುಜ** = ಮಗ

**ಪ್ರಾಯ** = ವಯಸ್ಸು

**ಅಕ್ಕನ ಮಗ** = ಪ್ರೀತಿಯ ಸೋದರಳಿಯ

**ಒಪ್ಪಿಡಿ ಅವಲಕ್ಕಿಯ –** ಕುಚೇಲನು ಕೃಷ್ಣನನ್ನು ಕಾಣಲು ಬಂದಾಗ ಒಂದು ಹಿಡಿ ಅವಲಕ್ಕಿಯನ್ನು ತಂದ ಸಂದರ್ಭ.

**Classification:** Keerthane
**Ankita:** sri purandara vittala
**Location:** Tirupati
**Category:** Krishna Stuti, Jeevanoddhara
**Sub-Category:** ranga, Krishna, Tirupati, Dhruva, srinivasa, karma, ajamila, gaja, draupadi, rushi, patni, shapa, avalakki, uraga, aprameya, asura, maga, papa, prahallada, karuna,
**Pravachana:** NA
**Explanation:** NA